# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ಅರಕಲಗೂಡು

ಸಿ.ಸಿ.ನಂ. 264/2017

ದಿನಾಂಕಃ 09/03/2021

ನಡುವೆ ಃ- ಕರ್ನಾಟಕ ಸರ್ಕಾರ
ಪರ ಕೊಣನೂರು ಪೊಲೀಸರು

-------- ಪಿರ್ಯಾದಿದಾರ

ಃ ವಿರುದ್ಧಃ

ಮಂಜು

---------- ಆರೋಪಿತರು

## ದೋಷಾರೋಪಣೆ

ನಾನು ಶ್ರೀಮತಿ. ಸರೋಜ. ಎಮ್. ಎಮ್.ಎ.ಎಲ್.ಎಲ್.ಎಮ್. ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಅರಕಲಗೂಡು ಆದ ನಾನು ಆರೋಪಿತರಾದಃ

ಮಂಜು ಬಿನ್ ಕುಮ್ಮಣ್ಣ,
ವಯಸ್ಸುಃ 26 ವರ್ಷ,
ವಾಸಃ ಅಂಬೇಡ್ಕರ್ ನಗರ,
ಕೊಣನೂರು ಟೌನ್,
ಅರಕಲಗೂಡು ತಾಲ್ಲೂಕು.

ನಿಮ್ಮಗಳ ಮೇಲೆ ಇರುವ ದೋಷಾರೋಪಣೆ ಏನೆಂದರೆ,

ದಿನಾಂಕಃ12-07-2015 ರಂದು ಬೆಳಿಗ್ಗೆ 11 ಗಂಟೆ ಸಮಯದಲ್ಲಿ ಸಾಕ್ಷಿ-1 ಸವಿ ಸಿ.ಯು ರವರು ಠಾಣೆ ಪ್ರಭಾರೆಯಲ್ಲಿದ್ದಾಗ ಯಾರೋ ಪೊಲೀಸ್ ಬಾತ್ಮೀದಾರರು ಸಾಕ್ಷಿ-1 ರವರಿಗೆ ಫೋನ್ ಕರೆ ಮಾಡಿ ಕೊಣನೂರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಕೊಣನೂರು ಟೌನ್, ಅಂಬೇಡ್ಕರ್ ನಗರ ವಾಸಿ ಆರೋಪಿ ಮಂಜು ಬಿನ್ ಕುಮ್ಮಣ್ಣರವರು ಯಾವುದೇ ಪರವಾನಗಿ ಇಲ್ಲದೆ ಸಾರ್ವಜನಿಕರಿಗೆ ಹಣವನ್ನು ಸಾಲವಾಗಿ ನೀಡಿ ಅವರಿಂದ ಅಧಿಕ ಬಡ್ಡಿ ಮರಿಬಡ್ಡಿ ವಸೂಲಿ ಮಾಡಿ ಸಾರ್ವಜನಿಕರಿಗೆ ವಂಚಿಸುತ್ತಾ ಬಡ್ಡಿ ದಂದೆಯಲ್ಲಿ ತೊಡಗಿದ್ದಾರೆಂದು ಬಂದ ಖಚಿತ ಮಾಹಿತಿ ಮೇರೆಗೆ ಮೇಲಾಧಿಕಾರಿಗಳಿಂದ ಶೋಧನ ಆದೇಶದ ವಾರೆಂಟ್ ಪಡೆದು ಸಾಕ್ಷಿ-2 ರಿಂದ 6 ಮತ್ತು ಪಂಚನಾಮೆ ಸಾಕ್ಷಿದಾರರುಗಳಾದ 7,8 ರವರುಗಳ ಸಮೇತ ಬಾತ್ಮೀದಾರರ ಮಾಹಿತಿಯಂತೆ ಆರೋಪಿಯಾದ ನಿಮ್ಮ ಮನೆಗೆ ದಾಳಿ ಮಾಡಿ ಜಪ್ತಿ ಮಾಡಿದ ಸಂದರ್ಭದಲ್ಲಿ ನೀವು ಲೆಕ್ಕ ಬರೆದಿರುವ ಪುಸ್ತಕ, ಆನ್ ಡಿಮ್ಯಾಂಡ್

ಪ್ರನೋಟ್, ವಿವಿಧ ಬ್ಯಾಂಕ್ ಗಳ ಖಾಲಿ ಚೆಕ್ ಗಳಿಗೆ ಸಹಿ ಪಡೆದಿರುವ ಚೆಕ್ ಗಳನ್ನು ಇಟ್ಟುಕೊಂಡಿದ್ದು, ಹಣಕಾಸಿನ ವ್ಯವಹಾರ ನಡೆಸಲು ಅಧಿಕೃತ ದಾಖಲೆಗಳಿಲ್ಲದೆ ಸಾರ್ವಜನಿಕರಿಗೆ ಸಾಲವನ್ನು ನೀಡಿ ಹೆಚ್ಚಿನ ಬಡ್ಡಿ, ಹಾಗೂ ಮರಿಬಡ್ಡಿಯನ್ನು ಪಡೆದು ಅಪರಾಧವೆಸಗಿರುತ್ತೀರಿ. ಆದ್ದರಿಂದ ನೀವು 4 ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇದ ಅಧಿನಿಯಮ 2004 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ. ಆದ್ದರಿಂದ ಸದರಿ ಅಪರಾಧವು ನನ್ನ ವಿಚಾರಧೀನ ಅಪರಾಧವಾಗಿದೆ.

ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭನುಸಾರವಾಗಿ ಆರೋಪಿಯಾದ ನೀವು ಮೋಸ ಮಾಡುವ ಉದ್ದೇಶದಿಂದ ಸಾರ್ವಜನಿಕರಿಂದ ಆನ್ ಡಿಮ್ಯಾಂಡ್ ಪ್ರನೋಟ್ ವಿವಿಧ ಬ್ಯಾಂಕ್ ಗಳ ಖಾಲಿ ಚೆಕ್ ಗಳನ್ನು ಪಡೆದು ಅಧಿಕ ಬಡ್ಡಿ ಮತ್ತು ಮರಿ ಬಡ್ಡಿಯನ್ನು ಅವರಿಂದ ವಸೂಲಿ ಮಾಡಿ ಸಾರ್ವಜನಿಕರಿಗೆ ವಂಚಿಸಿರುತ್ತೀರಿ. ಆದ್ದರಿಂದ ನೀವು ಭಾ.ದಂ.ಸಂ.ಕಲಂಃ420 ರಡಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ. ಆದ್ದರಿಂದ ಸದರಿ ಅಪರಾಧವು ನನ್ನ ವಿಚಾರಧೀನ ಅಪರಾಧವಾಗಿದೆ.

( ಈ ಆರೋಪಣೆಯ ಅಂಶಗಳನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿ ತಿದ್ದುಪಡಿ ಮಾಡಿದ ನಂತರ ಸದರಿ ಆರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಗಿದೆ ಈ ಹೊತ್ತು ದಿನಾಂಕ 09 ನೇ ಮಾರ್ಚ್ -2021).

( ಶ್ರೀಮತಿ ಸರೋಜ. ಎಂ.)
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಅರಕಲಗೂಡು.